ಹುಕ್ಕೇರಿ ತಾಲ್ಲೂಕಿನಲ್ಲಿ ಜೆ.ಆರ್.ವೈ. 80% ಜೆ.ಆರ್.ವೈ. 20% ಯೋಜನೆಯಲ್ಲಿ ತೆಗೆದುಕೊಂಡ ಕಾಮಗಾರಿ ಕೆಲಸ

478 - ಶ್ರೀ ಉಮೇಶ.ವಿ. ಕತ್ತಿ (ಹುಕ್ಕೇರಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ ಜೆ.ಆರ್.ವೈ. 80% ಜೆ.ಆರ್.ವೈ. 20% ಯೋಜನೆ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ವಿವರವೇನು;

ಆ) ಆ ಕಾರ್ಯಗಳು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಅದನ್ನು ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) 94ನೇ ಫೆಬ್ರವರಿ ಅಂತ್ಯದವರೆಗೆ ಜೆ.ಆರ್.ವೈ. 80% ಮತ್ತು 20% ರಲ್ಲಿ ಕ್ರಮವಾಗಿ ಈ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

80 % : ರೂ. 37.217 ಲಕ್ಷ

20% : ರೂ. 8.437 ಲಕ್ಷ

ಆ) ಇಲ್ಲ.

ಇ) ಪ್ರಶ್ನೆ (ಅ)ಗೆ ಉತ್ತರಿಸಿರುವಂತೆ ಇದು ಉದ್ಭವಿಸುವುದಿಲ್ಲ.

ಬೆಂಗಳೂರು ಗಾಯತ್ರಿನಗರ ಗೃಹ ನಿರ್ಮಾಣ ಸಂಘ ಕುರಿತು

436 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಗಾಯತ್ರಿನಗರ ಗೃಹನಿರ್ಮಾಣ ಸಹಕಾರ ಸಂಘದವರು ಅದರ ಸದಸ್ಯರಲ್ಲದವರಿಗೆ ನಿವೇಶನಗಳನ್ನು ಹಂಚಿದ್ದಾರೆ ಎಂಬ ಬಗ್ಗೆ ಸದಸ್ಯರಿಂದ ದೂರುಗಳು ಸರ್ಕಾರಕ್ಕೆ ಬಂದಿದೆಯೇ?

ಆ) ಸದರಿ ಗೃಹ ನಿರ್ಮಾಣ ಸಂಘದವರು ಹಂಚಿರುವ ನಿವೇಶನಗಳ ಸಂಖ್ಯೆ ಎಷ್ಟು ಅದರಲ್ಲಿ ನಿವೇಶನಗಳನ್ನು ಪಡೆದ ಹಳೆಯ ಸದಸ್ಯರುಗಳು ಮತ್ತು ಹೊಸ ಸದಸ್ಯೇತರರುಗಳು ಎಷ್ಟು?

ಇ) ನಿಯಮ ಬಾಹಿರವಾಗಿ ಸದಸ್ಯೇತರರಿಗೆ ನಿವೇಶನಗಳನ್ನು ಹಂಚಿರುವ ಈ ಗೃಹನಿರ್ಮಾಣ ಸಂಘದವರ ಮೇಲೆ ಕಾನೂನು ರೀತ್ಯಾ ಕ್ರಮಗಳನ್ನು ಸರಕಾರ ಜರುಗಿಸುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಇಲ್ಲಾ

ಆ) 120 ನಿವೇಶನಗಳನ್ನು ಸಂಘ ಹಂಚಿರುತ್ತದೆ. ಹೊಸ ಸದಸ್ಯೇತರರಿಗೆ ಹಂಚಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 23.3.94ರಂದು ವಿಧಾನಸಭೆಯಲ್ಲಿ ಪ್ರಶ್ನೋತ್ತರಗಳು ನಡೆಯದ ಕಾರಣ ಆ ದಿನದ 11ನೇ ಪಟ್ಟಿಯ ಚುಕ್ಕೆ ಗುರುತಿನ